ಅಧ್ಯಕ್ಷರು.—ನೀವು ಇದನ್ನು ಹೇಳುತ್ತೀರಿ ಎಂದು ಗೊತ್ತಿತ್ತು. ಈಗ ಕುಶಾಲ್ ಅವರು ಹೇಳಲಿ.

ನಿಯಮ ೩೩೪ರ ಮೇರೆಗೆ

ಸೂಳ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಕುಶಾಲ್ (ಸುಳ್ಯ).—ಮಾನ್ಯ ಅಧ್ಯಕ್ಷರೆ, ಸೂಳ್ಯ ವಿಧಾನಸಭಾ ಕ್ಷೇತ್ರದ ಸೂಳ್ಯ ಪುರಸಭೆ ಪರಿಮಿತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿ ೧೫ ದಿನಗಳಿಂದಲಲ್ಲಿಯ ಜನರು ತೊಂದರೆಗೊಳಗಾಗಿದ್ದಾರೆ. ನಗರಸಭೆಯಾಗಲೀ ಸರಕಾರವಾಗಲೀ ತಕ್ಕ ಕ್ರಮ ಕೈಗೊಳ್ಳದೆ ಅಲ್ಲಿಯ ಜನರು ಕಂಗಾಲಾಗಿದ್ದಾರೆ. ಈ ಪುರಸಭೆಗೆ ಸರಕಾರದಿಂದ ಕುಡಿಯುವ ನೀರಿನ ಬಾಬ್ತು ರೂ. ೨೬ ಲಕ್ಷ ಮಂಜೂರಾತಿ ನೀಡಿದೆ. ಸದರಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪುರಸಭೆ ತುರ್ತು ಕ್ರಮ ಕೈಗೊಳ್ಳದೆ ಕಾಮಗಾರಿ ಕೈಗೆತ್ತಿಕೊಂಡಿರುವುದಿಲ್ಲ. ಮತ್ತು ಇಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿ ಉದ್ಭವಿಸಂವ ಸಂಭವ ವಿದ್ದು ಸರಕಾರದಿಂದ ಈ ಪುರಸಭೆ ಪರಿಮಿತಿಗೆ ಆರು ಕೊಳವೆ ಬಾವಿಗಳು ಮಂಜೂರಾಗಿದೆ. ಆದರೆ ಇದರ ಕೆಲಸ ಪೂರೈಸಲು ಏನೂ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ ಕೂಡಲೇ ಈ ಕೊಳವೆ ಬಾವಿಗಳನ್ನಾದರೂ ತೋಡಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ನೀಗಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕಾ ಮಂತ್ರಿ).—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಲಕ್ಷ್ಮೀ ಸಾಗರ್ ಅವರು ಉತ್ತರ ಕೊಡಬೇಕಾಗಿತ್ತು. ಆದರೆ ಅವರು ಕೌನ್ಸಿಲ್ಲಿಗೆ ಹೋಗಿರುವುದರಿಂದ ತಮ್ಮ ಆಪ್ಪಣೆ ಪಡೆದು ನಾನು ಅವರ ಉತ್ತರವನ್ನು ಓದಂತ್ತೇನೆ. ಈ ಪಟ್ಟಣದ ಜನಸಂಖ್ಯೆ ೧೯೮೧ ನೇ ಜನಗಣತಿ ಪ್ರಕಾರ ೧೦೫೭೪ ಇರುತ್ತದೆ. ಈಗ ಸದ್ಯಕ್ಕೆ ೫ ಮೀಟರ್ ವ್ಯಾಸದ ಜಾಕ್‌ವೆಲ್ ಪಾಯಶ್ವಿನಿ ನದಿಯ ದಂಡೆಯಲ್ಲಿರುತ್ತದೆ. ಈ ಜಾಕ್‌ವೆಲ್‌ನಿಂದ ಮತ್ತು ಒಂದು ಮೇಲ್ಮಟ್ಟದ ಜಲ ಸಂಗ್ರಹಾಲಯದಿಂದ ಪ್ರತಿಯೊಬ್ಬನಿಗೆ ಪ್ರತಿದಿನಕ್ಕೆ ೫ ಗ್ಯಾಲನ್‌ನಂತೆ ನೀರು ಸರಬರಾಜು ಆಗುತ್ತದೆ. ಈ ಯೋಜನೆಯನ್ನು ೧೯೭೩ ರಲ್ಲಿ ಪೂರೈಸಲಾಗಿದೆ. ಇದಲ್ಲದೆ ಊರಲ್ಲಿ ೪ ಕೊಳವೆ ಬಾವಿಗಳನ್ನು ಹಾಕಿ ಕೈಪಂಪುಗಳನ್ನು ಜೋಡಿಸಲಾಗಿದೆ. ಈ ಕೊಳವೆ ಬಾವಿಗಳಿಂದ ಪ್ರತಿ ಗಂಟೆಗೆ ೭೦೦೦ ಗ್ಯಾಲನ್ನಿನಂತೆ ನೀರು ಪಡೆಯಬಹುದು.

ಸೂಳ್ಯ ಪಟ್ಟಣಕ್ಕೆ ನೀರು ಸರಬರಾಜು ಅಭಿವೃದ್ಧಿ ಯೋಜನೆ ಜೂನ್ ೧೯೮೫ ರಲ್ಲಿ ಮಂಜೂರಾಗಿದೆ. ಈ ಯೋಜನೆಯ ಅಂದಾಜು ೨೬ ಲಕ್ಷ ರೂಪಾಯಿಗಳು. ಈಗ ಇದ್ದ ಪಂಪ್‌ಹೌಸ್ ಸುಧಾರಣೆ ಒಂದು ಮೇಲ್ಮಟ್ಟದ ಸಂಗ್ರಹಾಲಯ ಮತ್ತು ವಿತರಣಾ ವ್ಯವಸ್ಥೆಯ ಅಭಿವೃದ್ಧಿ ಈ ಯೋಜನೆಯಲ್ಲಿ ಒಳಗೊಂಡಿದೆ. ಸೆಟ್ಲಿಂಗ್ ಟ್ಯಾಂಕ್, ಇನ್‌ಟೇಕ್ ಚೇಂಬರ್ ಮತ್ತು ಪಂಪ್‌ಹೌಸ್ ಸುಧಾರಣೆಯ ಸಲುವಾಗಿ ಜನವರಿಯಲ್ಲಿ ಟೆಂಡರ್ ಕರೆಯಲಾಗಿದೆ. ಉಳಿದ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

(2) ಧಾರವಾಡ ಜಿಲ್ಲೆಯ ಸತ್ತೂರಿನಲ್ಲಿರುವ ಭೋರೂಕ ಟೆಕ್ಸ್‌ಟೈಲ್ಸ್ ಮಿಲ್ಲಿನ ನೌಕರರ ಬೇಡಿಕೆಗಳು.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆ ಸತ್ತೂರಿನಲ್ಲಿರುವ ಭೋರೂಕ ಟೆಕ್ಸ್‌ಟೈಲ್ಸ್ ಮಾಲೀಕ ವರ್ಗದವರು ತಮ್ಮ ಕಾರ್ಖಾನೆಯ ೭೦೦ ಜನ ನೌಕರರ ನ್ಯಾಯ ಬೇಡಿಕೆಗಳಾದ ವೇತನ, ಉಚ್ಚತಮ ಸೇವಾ ಸೌಕರ್ಯ, ಸೇವೆಯನ್ನು ಖಾಯಂಗೊಳಿಸುವುದು ಇವೇ ಮುಂತಾದ ಬೇಡಿಕೆಗಳನ್ನು ಒತ್ತಾಯಪಡಿಸುತ್ತಿದ್ದಾರೆ. ಆದರೆ ಮಾಲೀಕರು ನೌಕರರು ಬಿ. ಎಂ. ಎಸ್. ಕಾರ್ಮಿಕ ಸಂಸ್ಥೆಗೆ ಈ ನೌಕರರು ಸೇರಿದ್ದಾರೆಂಬ ಕಾರಣಕ್ಕಾಗಿ ಕಾರ್ಮಿಕ ವಿರೋಧಿ ಚಟುವಟಿಕೆ ನಡೆಸಿದ್ದಾರೆ. ಬೇಡಿಕೆ ಬಗ್ಗೆ ಮಾತುಕತೆಗೆ ಬರುತ್ತಿಲ್ಲ. ಗೂಂಡಾಗಳನ್ನು ಬಳಸಿ ಕಾರ್ಮಿಕರ ಮೇಲೆ ಹಿಂಸೆ ಪ್ರಯೋಗಿಸಿ ಸಂಘವನ್ನು ಒಡೆಯಲು ಯತ್ನಿಸಿದ್ದಾರೆ. ಉತ್ತರ ಪ್ರದೇಶದಿಂದ ೨೦೦ ಕೂಲಿಯಾಳುಗಳನ್ನು ಕರೆಸಿದ್ದಾರೆ. ಈ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ

ಧರಣಿ ಕುಳಿತಿದ್ದಾರೆ. ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಕಾರ್ಮಿಕರಿಗೆ ನ್ಯಾಯ ದೊರಕಿಸಲು ಒತ್ತಾಯಿಸುತ್ತೇವೆ.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿ).—ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

ಧಾರವಾಡ ಜಿಲ್ಲಾ ಸತ್ಯೂರ್‌ನ ಭೋರಂಕಾ ಟಿಕ್ಸ್‌ಟೈಲ್ಸ್‌ನ ಸಂಸ್ಥೆಯಲ್ಲಿನ. ಒಂದು ಕಾರ್ಮಿಕ ಸಂಘವಾದ ಧಾರವಾಡ ಜಿಲ್ಲಾ ಮಂಜ್ದೂರ್ ಸಂಘವು ದಿನಾಂಕ ೩–೧೧–೮೫ ರಂದು ೨೪ ಬೇಡಿಕೆಗಳನ್ನು ಒಳಗೊಂಡ ಒಂದು ಬೇಡಿಕೆ ಪಟ್ಟಿಯನ್ನು ಆಡಳಿತ ವರ್ಗದ ಮುಂದೆ ಇಟ್ಟಿತು. ಈ ಬೇಡಿಕೆಗಳು ಸಫಲವಾಗದಿದ್ದಾಗ ದಿನಾಂಕ ೯–೧೧–೮೫ ರಂದು ಮುಷ್ಕರ ಹೂಡುವುದಾಗಿ ತಿಳಿಸಿದರು. ತಕ್ಷಣವೆ ಹುಬ್ಬಳ್ಳಿಯ ಸಹಾಯಕ ಕಾರ್ಮಿಕ ಕಮಿಷನರ್‌ರವರು ಮಧ್ಯೆ ಪ್ರವೇಶಿಸಿ ದಿನಾಂಕ ೭–೧೧–೮೫ ರಂದು ಜಂಟಿ ಸಭೆಯನ್ನು ಕರೆದರು, ಈ ಸಭೆಗೆ ಮಾಲೀಕ ವರ್ಗದವರು ಹಾಜರಾಗಲಿಲ್ಲ. ಕಾರ್ಮಿಕ ಸಂಘವು ತನ್ನ ಮುಷ್ಕರ ತೀರ್ಮಾನವನ್ನು ದಿನಾಂಕ ೧೬–೧೧–೮೫ ಕ್ಕೆ ಮುಂದೂಡಿತು. ಮುಂದಿನ ಜಂಟಿ ಸಭೆಯನ್ನು ದಿನಾಂಕ ೧೫–೧೧–೮೫ ರಂದು ಕರೆಯಲಾಗಿತ್ತು. ಆಡಳಿತ ವರ್ಗದವರು ಈ ಸಭೆಗೂ ಹಾಜರಾಗಲಿಲ್ಲ. ನಂತರದ ಸಂಧಾನ ಸಭೆಗಳು ದಿನಾಂಕ ೫, ೬ ೧೬ನೇ ಡಿಸೆಂಬರ್ ೮೫ ರಂದು ನಡೆದವು, ಆಡಳಿತ ವರ್ಗದವರು ಸಭೆಗೆ ಹಾಜರಾಗದೆ ದಿನಾಂಕ ೧೬–೧೨–೮೫ರಂದು ಕಾಗದ ಬರೆದು ಅವರು ರಾಜೀ ಸಂಧಾನ ಸಭೆಗೆ ಹಾಜರಾಗಕೂಡದು ಎಂದು ನ್ಯಾಯಾಲಯದ ತಡೆಯಾಜ್ಞೆ ಇದೆಯೆಂದು ತಿಳಿಸಿದರು. ಈ ಮಧ್ಯೆ ದಿನಾಂಕ ೬–೧೨–೮೫ ರಂದು ಇದೇ ಸಂಸ್ಥೆಯ ಇನ್ನೊಂದು ಕಾರ್ಮಿಕ ಸಂಘವಾದ ಬೋರಂಕಾ ಟಿಕ್ಸ್‌ಟೈಲ್ಸ್‌ನ ಕಾರ್ಮಿಕ ಸಂಘವು ಸಭೆಗೆ ಹಾಜರಾಗಿ ಅವರನ್ನು ರಾಜೀ ಸಂಧಾನ ಸಭೆಗೆ ಆಹ್ವಾನಿಸಬೇಕಾಗಿ ತಿಳಿಸಿದರು. ಆದರೆ ಧಾರವಾಡ ಜಿಲ್ಲಾ ಮಂಜ್ದೂರ್ ಸಂಘದ ಪ್ರತಿನಿಧಿಗಳು ಇನ್ನೊಂದು ಕಾರ್ಮಿಕ ಸಂಘದ ಜೊತೆಗೆ ಸಂಧಾನ ಸಭೆಯಲ್ಲಿ ಕುಳಿತುಕೊಳ್ಳಲು ಇಷ್ಟ ಪಡದೆ ಪ್ರತ್ಯೇಕ ಸಭೆಗಳನ್ನು ನಡೆಸಬೇಕೆಂದು ಕೇಳಿದರು. ಸಂಧಾನ ಸಭೆಯನ್ನು ನಡೆಸುವುದಕ್ಕೆ ತಡೆಯಾಜ್ಞೆ ಇದ್ದುದರಿಂದ ಮುಂದಿನ ಸಂಧಾನ ಸಭೆಗಳನ್ನು ನಡೆಸಲಾಗಲಿಲ್ಲ.

ಈ ಮಧ್ಯೆ ದಿನಾಂಕ ೨೧–೧೧–೮೫ ರಂದು ಧಾರವಾಡ ಜಿಲ್ಲಾ ಮಂಜ್ದೂರ್ ಸಂಘದ ಸದಸ್ಯರಾದ ಕೆಲಸಗಾರರಿಂದ ಮುಷ್ಕರ ಪ್ರಾರಂಭವಾಗಿತ್ತು.

ದಿನಾಂಕ ೬–೧–೮೬ ರಂದು ಉದ್ವೇಕ ಪರಿಸ್ಥಿತಿಯೂ ಉಂಟಾಯಿತು. ತಡೆಯಾಜ್ಞೆ ಕಾರಣ ಜಿಲ್ಲಾಧಿಕಾರಿಗಳ ಮುಂದೆ ಒಂದು ಸಭೆಯನ್ನು ಕರೆಯಲಾಯಿತು. ನಂತರ ಈ ಸಭೆಗಳು ದಿನಾಂಕ ೩, ೯, ೧೫, ೧೬ನೇ ಜನವರಿ ೮೬ ರಂದು ನಡೆದವು. ಆಡಳಿತ ವರ್ಗದವರ ಹೇಳಿಕೆಯಂತೆ ಧಾರವಾಡ ಜಿಲ್ಲಾ ಮಜ್ದೂರ್ ಸಂಘದ ಸದಸ್ಯರಾದ ಕೆಲಸಗಾರರಿಂದ ಮಾತ್ರ ಮುಷ್ಕರ ನಡೆಯುತ್ತಿದೆ, ಅದು ಬಹುಮತ ಪಡೆದಿಲ್ಲವೆಂತಲೂ, ಮತ್ತು ಅವರು ಕಾರ್ಖಾನೆಯನ್ನು ಮತೊಂದು ಸಂಘದ ಸದಸ್ಯರಾದ ಕೆಲಸಗಾರರ ಸಹಾಯದಿಂದ ನಡೆಸುತ್ತಿರುವುದಾಗಿಯೂ ತಿಳಿಸಿದರು. ಆದರೆ ಧಾರವಾಡ ಜಿಲ್ಲಾ ಮಜ್ದೂರ್ ಸಂಘ ಪ್ರತಿನಿಧಿಗಳ ಹೇಳಿಕೆಯಂತೆ ಕಾರ್ಖಾನೆಯ ಆಡಳಿತ ವರ್ಗದವರು ಹೊರಗಿನವರ ಸಹಾಯದಿಂದ ನಡೆಸುತ್ತಿದ್ದಾರೆಂಬುದೆ ಆಗಿತ್ತು. ಜಿಲ್ಲಾಧಿಕಾರಿಗಳು, ವಿಶೇಷ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ಅಧಿಕಾರಿಗಳ ಮತ್ತು ಸಹಾಯಕ ಕಾರ್ಮಿಕ ಕಮಿಷನರ್‌ರವರು ಎಷ್ಟೆ ಪ್ರಯತ್ನ ಪಟ್ಟಾಗಲೂ ಒಪ್ಪಂದ ಸಾಧ್ಯವಾಗಲಿಲ್ಲ.

ಧಾರವಾಡ ಜಿಲ್ಲಾ ಮಜ್ದೂರ್ ಸಂಘದ ಹೇಳಿಕೆಯಂತೆ ದಿನಾಂಕ ೨೧–೧೧–೮೫ ರಂದು ಕೆಲಸಗಾರರು ಕೆಲಸಕ್ಕೆ ಹೋದಾಗ ಆಡಳಿತ ವರ್ಗದರು ಸುಮಾರು ೨೫ ಜನ ಕೆಲಸಗಾರರನ್ನು ಒಳಕ್ಕೆ ಬಿಡಲಿಲ್ಲ ವೆಂತಲ್ಲೂ, ಆದುದರಿಂದ ಎಲ್ಲಾ ಕೆಸಲಗಾರರನ್ನು ಒಳಕ್ಕೆ ಬಿಡದ ಹೊರತು ಕೆಲಸ ಪ್ರಾರಂಭವಾಗುವುದಿಲ್ಲ ವೆಂತಲೂ ತಿಳಿಸಿದರು. ಆಡಳಿತ ವರ್ಗದವರ ಹೇಳಿಕೆ ಪ್ರಕಾರ ಅವರು ೧೬ ಜನ ಕೆಲಸಗಾರರನ್ನು ಕೆಲಸಕ್ಕೆ ವಾಪಸ್ಸು ತೆಗೆದುಕೊಳ್ಳಲಾಗುವುದಿಲ್ಲವೆಂತಲೂ, ಏಕೆಂದರೆ ಅವರು ಕಾಂಟ್ರಾಕ್ಟ್ ಮೇಲೆ ಕೆಲಸ ಮಾಡುತ್ತಿದ್ದ ಕೆಲಸಗಾರರಾದುದರಿಂದ ಮತ್ತು ಅವರು ಕಾಂಟ್ರಾಕ್ಟ್ ಅವಧಿತೀರಿರುವುದರಿಂದ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿರುವುದಿಲ್ಲವೆಂತಲೂ ನಿಲುವು ತಳೆದಿದ್ದಾರೆ. ಈ ಬಗ್ಗೆ ಯಾವ ಒಪ್ಪಂದವೂ ಸಾಧ್ಯವಾಗದೆ ಹೋದುದರಿಂದ ಸಂಧಾನ ಪ್ರಯತ್ನವು ವಿಫಲವಾಯಿತೆಂದು ಪರಿಗಣಿಸಿ ಹುಬ್ಬಳ್ಳಿಯ ಸಹಾಯಕ ಕಾರ್ಮಿಕ ಕಮಿಷನರ್‌ರವರು ವಿಫಲ ವರದಿಯನ್ನು ಕಳುಹಿಸಿದ್ದಾರೆ. ಅದು

ಪರಿಶೀಲನೆಯಲ್ಲಿ ಇದೆ. ಅಗತ್ಯವಾದರೆ ಕೆಲಸಗಾರರ ಪರವಾಗಿ ಧಾರವಾಡ ಜಿಲ್ಲಾ ಮಜಜ್ದೂರ್ ಸಂಘದ ಮಂಡಳಿಯವರು ಎತ್ತಿರುವ ಬೇಡಿಕೆಗಳನ್ನು ನ್ಯಾಯ ಪಂಚಾಯಿತಿಗೆ ಒಪ್ಪಿಸಿ ಮುಸ್ಕರ ಮುಂದುವರಿಕೆಯಾನ್ನು ನಿಷೇದಿಸಬಹುದಾಗಿದೆ. ಈ ಬಗ್ಗೆ ತಕ್ಷಣವೇ ಕ್ರಮಗಳನ್ನು ಕೈಗೊಳ್ಳಿಲಾಗುತ್ತಿದೆ

(3) ಪುತ್ತೂರಿಂ ಆಸ್ಪತ್ರೆಯಲ್ಲಿ ಮುಂಖ್ಯ ವೈದ್ಯಾಧಿಕಾರಿಯ ನೇಮಕ

ಶ್ರೀ ವಿನಯಕುಮಾರ್ ಸೊರಕೆ.— ಅಧ್ಯಕ್ಷರೇ ಪುತ್ತೂರು ತಾಲ್ಲೂಕಿನಲ್ಲಿ ಪುತ್ತೂರಿಂ ಪಟ್ಟಣದಲ್ಲಿರುವಂತಹ ಸರಕಾರಿ ಆಸ್ಪತ್ರೆಯು ಮುಖ್ಯ ವೈದ್ಯಾಧಿಕಾರಿಗಳ ವಿರುದ್ಧ ಕಳೆದ ೧೦ ತಿಂಗಳುಗಳ ಹಿಂದೆ ಹಲವಾರು ಅವ್ಯವಹಾರದ ಆಪಾದನೆಯ ಮೇಲೆ ಆರೋಗ್ಯ ಮಂತ್ರಿಗಳಿಗೆ ಪತ್ರ ಬರೆದಾಗ, ಸದರಿ ಮುಖ್ಯ ವೈದ್ಯಾಧಿಕಾರಿಯನ್ನು ವರ್ಗಾವಣೆ ಮಾಡಿದರು. ಕಳೆದ ೧೦ ತಿಂಗಳುಗಳಿಂದ ಪುತ್ತೂರು ಸರಕಾರಿ ಆಸ್ಪತ್ರೆಗೆ ಮುಖ್ಯ ವೈದ್ಯಾಧಿಕಾರಿಯು ಪುನರ್‌ನೇಮಕವಾಗಿಲ್ಲ. ಹಲವಾರು ಸಾರಿ ಆರೋಗ್ಯ ಮಂತ್ರಿಗಳಿಗೆ ಪತ್ರ ಮೂಲಕ ತಿಳಿಸಿದರೂ ಮಂತ್ರಿಗಳು ಕೂಡಲೇ ಮುಖ್ಯ ವೈದ್ಯಾಧಿಕಾರಿಯನ್ನು ನೇಮಕ ಮಾಡಬೇಕು ಎಂದು ಹುಕುಂ ಕೊಟ್ಟರೂ ಇದುವರೆಗೂ ಪುತ್ತೂರು ಸರಕಾರಿ ಆಸ್ಪತ್ರೆಗೆ ಮುಂಖ್ಯ ವೈದ್ಯಾಧಿಕಾರಿ ನೇಮಕವಾಗದಿರಲು ಕಾರಣವೇನು ? ಸದರಿ ವರ್ಗಾವಣೆ ಆದಂತಹ ಮುಖ್ಯ ವೈದ್ಯಾಧಿಕಾರಿಗಳು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಲ್ಲಿ ಪ್ರಭಾವಿ ವ್ಯಕ್ತಿಗಳೇ ? ಪುತ್ತೂರು ಸರಕಾರಿ ಆಸ್ಪತ್ರೆಗೆ ಮುಖ್ಯ ವೈದ್ಯಾಧಿಕಾರಿಗಳು ಇಲ್ಲದೆ ಇರುವುದರಿಂದ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗಿತ್ತಾ ಇದ್ದು, ಇದನ್ನು ಕೂಡಲೇ ಮಾನ್ಯ ಮಂತ್ರಿಗಳು ನಿವಾರಿಸಿ ಕೊಡುತ್ತಾರೆಯೇ ?

ಶ್ರೀ ಎಚ್.ಎಲ್. ತಿಮ್ಮೇಗೌಡ.— ಅಧ್ಯಕ್ಷರೇ ಪುತ್ತೂರು ಪಟ್ಟಣದಲ್ಲಿ ಈ ಕೆಳಕಂಡ ವೈದ್ಯರ ಹುದ್ದೆಗಳು ಮಂಜೂರಾಗಿವೆ.

೧.	ಆರೋಗ್ಯ ಅಧಿಕಾರಿ ದರ್ಜೆ 'ಎ' (ಕಿರಿಯ)	: ೨ (ಒಂದು ಸಾರ್ವಜನಿಕ ಆಸ್ಪತ್ರೆಗೆ ಮತ್ತು ಒಂದು ಪಿ.ಪಿ.ಸಿ.ಗೆ.)
೨.	ಸಹಾಯಕ ಶಸ್ತ್ರ ಚಿಕಿತ್ಸಕರು	: ೩ (ಎರಡು ಸಾರ್ವಜನಿಕ ಆಸ್ಪತ್ರೆಗೆ) (ಒಂದು ಪಿ.ಪಿ.ಸಿ.ಗೆ)
೩.	ದಂತ ಸಹಾಯಕ ಚಿಕಿತ್ಸಕರು	: ೧

ಡಾ. ಪುಟ್ಟಸ್ವಾಮಾಚಾರ್, ಮುಖ್ಯ ವೈದ್ಯಾಧಿಕಾರಿ ಇವರನ್ನು ಸಾರ್ವಜನಿಕ ಆಸ್ಪತ್ರೆಗೆ ಪುತ್ತೂರಿನಿಂದ ಹಾಸನ ಜಿಲ್ಲಾ ಆಸ್ಪತ್ರೆಗೆ ಸರ್ಕಾರಿ ಆಜ್ಞೆ ಸಂಖ್ಯೆ ಎಚ್.ಎಫ್.ಡಬ್ಲ್ಯೂ ೭೦ ಎಂ.ಎಸ್.ಎಸ್. ೮೫ ದಿನಾಂಕ ೩೧-೫-೮೫ರಲ್ಲಿ ವರ್ಗವಾಗಿದೆ. ಅವರು ಪುತ್ತೂರಿನಲ್ಲಿ ಬಿಡುಗಡೆ ಹೊಂದಿರುತ್ತಾರೆ ಅಂದಿನಿಂದ ಈ ಹುದ್ದೆಯು ಖಾಲಿಯಿದೆ.

ವೈದ್ಯ ಎಂ.ಕೆ. ಪ್ರಸಾದ್‌ರವರು ಮುಖ್ಯ ವೈದ್ಯಾಧಿಕಾರಿಗಳ ಕಾರ್ಯಭಾರವನ್ನು ತಮ್ಮ ಸ್ವಂತ ಕೆಲಸದ ಜೊತೆಗೆ ಅಂದಿನಿಂದ ನಿರ್ವಹಿಸುತ್ತಿದ್ದಾರೆ. ಈ ಆಸ್ಪತ್ರೆಯಲ್ಲಿ ಈಗಾಗಲೇ ಇಬ್ಬರು ವೈದ್ಯರು ಕಾರ್ಯನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ಅಷ್ಟಾಗಿ ತೊಂದರೆ ಆಗಿರುವುದಿಲ್ಲ. ಆಸ್ಪತ್ರೆಯ ಕಾರ್ಯಕಲಾಪಗಳು ನಡೆಯುತ್ತಿವೆ. ಆದರು ಮುಖ್ಯ ವೈದ್ಯಾಧಿಕಾರಿಗಳ ಹುದ್ದೆಯನ್ನು ಆದಷ್ಟು ಜಾಗ್ರತೆ ತುಂಬಲಾಗುವುದು.

ಈಗಾಗಲೇ ೪೯ ಮಂದಿ ವೈದ್ಯರನ್ನು ಬಡ್ತಿ ಮಾಡಿ ಖಾಲಿ ಇರುವ ಹುದ್ದೆಗಳನ್ನು ತುಂಬಲಾಗಿದೆ. ಮಿಕ್ಕ ಹುದ್ದೆಗಳನ್ನು ಸಹ ಬಡ್ತಿ ಮುಖಾಂತರ ತುಂಬಲಾ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಈಗ ಮಾನ್ಯ ಸದಸ್ಯರು, ಈ ವರ್ಗವಾದವರು ಪ್ರಭಾವೀ ವ್ಯಕ್ತಿಗಳೇ ಎಂದು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಹಾಗೆ ಆರೋಪ ಮಾಡಿದ್ದಾರೆ. ಅವರು ಆ ಪ್ರಮಾಣದವರಾಗಿದ್ದರೆ ಅವರ ಟ್ರಾನ್ಸ್‌ಫರ್ರೇ ಆಗುತ್ತಾ ಇರಲಿಲ್ಲ. ಆದರೂ ಏಕೆ ಈ ರೀತಿ ಹೇಳಿದ್ದಾರೋ ಗೊತ್ತಾಗಲಿಲ್ಲ. ಇವತ್ತು ಅಲ್ಲಿ ಇನ್‌ಛಾರ್ಜ್‌ನವರು ಇದ್ದಾರೆ. ಅಸಿಸ್ಟೆಂಟ್ ಸರ್ಜನ್‌ನಿಂದ ಡೆಪ್ಯುಟಿ ಸರ್ಜನ್‌ಗೆ ಪ್ರಮೋಷನ್ ಮಾಡಬೇಕಾದರೆ ಪ್ರೊಸೀಜರ್ ಇದೆ. ಅದನ್ನೆಲ್ಲಾ ಮಾಡಿ ಆದಷ್ಟು ಜಾಗ್ರತೆ ಆ ಜಾಗವನ್ನು ತುಂಬುತ್ತೇವೆ.